<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 753
ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 20-12-2021
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ) | ಕರ್ನಾಟಕ ರಾಜ್ಯದಲ್ಲಿ ಎಷ್ಟು ಜಂಗಲ್ ಲಾಡ್ಜ್ ರೆಸಾರ್ಟ್ ಸಂಸ್ಥೆಗಳು ಅರಣ್ಯ ಪ್ರದೇಶದಲ್ಲಿ ಇವೆ; (ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸಂಸ್ಥೆ ವ್ಯಾಪ್ತಿಯಲ್ಲಿ 15 ಕ್ಯಾಂಪ್‌ಗಳು ಅರಣ್ಯ ಪ್ರದೇಶಗಳಲ್ಲಿರುತ್ತವೆ. ವಿವರ ಈ ಕೆಳಗಿನಂತಿದೆ.<br>1. ಭೀಮೇಶ್ವರಿ ನೇಚರ್ ಕ್ಯಾಂಪ್, ಭೀಮೇಶ್ವರಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ<br>2. ಕೆ.ಗುಡಿ ವೈಡರ್ ನೆಸ್ ಕ್ಯಾಂಪ್, ಕೆ.ಗುಡಿ, ಚಾಮರಾಜನಗರ ಜಿಲ್ಲೆ.<br>3. ದೇವಬಾಗ್ ಬೀಚ್ ರೆಸಾರ್ಟ್ಸ್, ಕಾರವಾರ, ಉತ್ತರ ಕನ್ನಡ ಜಿಲ್ಲೆ.<br>4. ಗಾಳಿಬೋರೆ ನೇಚರ್ ಕ್ಯಾಂಪ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.<br>5. ಬನ್ನೇರುಘಟ್ಟ ನೇಚರ್ ಕ್ಯಾಂಪ್, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.<br>6. ಓಲ್ಡ್ ಮ್ಯಾಗಜೀನ್ ಹೌಸ್, ಗಣೇಶ್ ಗುಡಿ, ಜೋಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ<br>7. ದುಬಾರೆ ಆನೆ ಶಿಬಿರ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ.<br>8. ಸಕ್ರೆಬೈಲು ನೇಚರ್ ಕ್ಯಾಂಪ್, ಸಕ್ರೆಬೈಲು, ಶಿವಮೊಗ್ಗ ಜಿಲ್ಲೆ.<br>9. ಆನೆಝರಿ ಬಟರ್ ಫ್ಲೈ ಕ್ಯಾಂಪ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.<br>10. ಸೀತಾನದಿ ನೇಚರ್ ಕ್ಯಾಂಪ್, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.<br>11. ಭಗವತಿ ನೇಚರ್ ಕ್ಯಾಂಪ್, ಕುದುರೆಮುಖ, ಚಿಕ್ಕಮಗಳೂರು ಜಿಲ್ಲೆ. |

| | | |
|---|---|---|
| | | 12. ಗೋಪಿನಾಥಂ, ಮಿಸ್ಟ್ರಿ ಟ್ರೈಲ್ಸ್ ಕ್ಯಾಂಪ್, ಗೋಪಿನಾಥಂ, ಚಾಮರಾಜನಗರ ಜಿಲ್ಲೆ.<br>13. ಲಾಗ್ ಕಾಟೇಜ್, ಜೆ.ಎಲ್ಆರ್. ಕಬಿನಿ, ನಿಸನಹಳ್ಳಿ, ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.<br>14. ಟೆಂಟೆಡ್ ಕ್ಯಾಂಪ್, ಜೆ.ಎಲ್. ಆರ್., ಹಳಿಯಾಳ ವಿಭಾಗ, (ದಾಂಡೇಲಿ ಕಾಳಿ ಕ್ಯಾಂಪ್)<br>15. ಲಾಗ್ . ಕಾಟೇಜ್ ಕ್ಯಾಂಪ್, ಜೆ.ಎಲ್. ಆರ್, ಹುಣಸನಹಳ್ಳಿ, ತರಿಕೆರೆ ತಾಲ್ಲೂಕು, ಭದ್ರಾ ವನ್ಯಜೀವಿ ವಿಭಾಗ, ಚಿಕ್ಕಮಗಳೂರು ಜಿಲ್ಲೆ. |
| ಆ) | ಸದರಿ ಜಂಗಲ್ ಲಾಡ್ಜ್ ರೆಸಾರ್ಟ್ ಸಂಸ್ಥೆಗಳಿಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅನ್ವಯವಾಗುವುದೇ; ಹಾಗಿದ್ದಲ್ಲಿ, ಅರಣ್ಯ ಸಂರಕ್ಷಣಾ ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಪಡೆದಿದ್ದಾರೆಯೆ; (ಅನುಮತಿ ಪತ್ರದ ಪ್ರತಿ ನೀಡುವುದು) | ಅರಣ್ಯ (ಸಂರಕ್ಷಣಾ) ಕಾಯ್ದೆ 1980 ಹಾಗೂ ನಿಯಮ 2003 ರಡಿ ಕೇಂದ್ರ ಸರ್ಕಾರದ ಪರಿಷ್ಕೃತ ಮಾರ್ಗಸೂಚಿ ಸಂಖ್ಯೆ: File No. 5-2/2017 – FC – Part (1) ದಿನಾಂಕ: 25–10–2021ರ ಅನ್ವಯ *"(Development/Construction of facilities which are not of permanent nature in forest areas for the purpose of Eco-tourism by Government Authorities shall not be considered as non – forestry activity for the purpose of Forest (Conservation) Act, 1980).* ಅಂದರೆ, ಅರಣ್ಯ ಇಲಾಖೆಯ ವಶದಲ್ಲಿರುವ ಭೂಮಿಯನ್ನು ಪರಿಸರ ಪ್ರವಾಸೋದ್ಯಮದ ಉದ್ದೇಶಕ್ಕಾಗಿ ಅರಣ್ಯ ಪ್ರದೇಶಗಳಲ್ಲಿ ಶಾಶ್ವತ ಸ್ವರೂಪ ಸೌಲಭ್ಯಗಳ ಅಭಿವೃದ್ಧಿ / ನಿರ್ಮಾಣವನ್ನು ಅರಣ್ಯೇತರ ಚಟುವಟಿಕೆಯೆಂದು ಪರಿಗಣಿಸಲಾಗುವುದು. ಆದುದರಿಂದ ಅಂತಹ ಶಾಶ್ವತ ಸ್ವರೂಪದ ಸೌಲಭ್ಯಗಳ ಅಭಿವೃದ್ಧಿ / ನಿರ್ಮಾಣ ಮಾಡಲು ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ.<br>ರಾಜ್ಯ ಸರ್ಕಾರದ ಉದ್ಯಮವಾದ ಜಂಗಲ್ ಲಾಡ್ಜ್ ರೆಸಾರ್ಟ್ ಸಂಸ್ಥೆಯು ಕೈಗೊಳ್ಳುವ ಯೋಜನೆಯು ಶಾಶ್ವತ ಸ್ವರೂಪ ಸೌಲಭ್ಯ ಅಭಿವೃದ್ಧಿ/ ನಿರ್ಮಾಣವನ್ನು ಹೊಂದಿದ್ದರೆ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ಅನ್ವಯವಾಗುವುದು.<br>ಮುಂದುವರೆದು, ಜಂಗಲ್ ಲಾಡ್ಜ್ ರೆಸಾರ್ಟ್ ಸಂಸ್ಥೆಗಳು ಅರಣ್ಯ ಸಂರಕ್ಷಣಾ ಕಾಯ್ದೆ 1980 ರಡಿಯಲ್ಲಿ |

| | | |
|---|---|---|
| | | ಪೂರ್ವಾನುಮತಿ ಪಡೆಯಲು 6 ಪ್ರಸ್ತಾವನೆಗಳನ್ನು ಅರಣ್ಯ ಇಲಾಖೆಗೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗಳು ಪರಿಶೀಲನಾ ಹಂತದಲ್ಲಿರುತ್ತವೆ. |
| ಇ) | ಜಂಗಲ್ ಲಾಡ್ಜ್ ರೆಸಾರ್ಟ್ ಸಂಸ್ಥೆಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಪರಿಸರ ಸ್ನೇಹಿ, ವನ್ಯಜೀವಿ ಗಮ್ಯಸ್ಥಾನಗಳು, ಏರಿಳಿತಗಳಿರುವ ನದಿಗಳು, ಸಾಹಸ ಕ್ರೀಡೆಗಳನ್ನು ಪ್ರೋತ್ಸಾಹಿಸುವ ವಾತಾವರಣ ಹೊಂದಿರುವ ಪರಿಸರದಲ್ಲಿ/ಅರಣ್ಯ ಪ್ರದೇಶದಲ್ಲಿ ಸಾಮಾನ್ಯವಾಗಿ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತದೆ. |

**ಸಂಖ್ಯೆ: ಅಪಜೀ98ಎಫ್‌ಎಲ್‌ಎಲ್ 2021**

**(ಉಮೇಶ್ ವಿ. ಕತ್ತಿ)**
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.